ಕರ್ನಾಟಕ ಸರ್ಕಾರ

ಕರ್ನಾಟಕ ಪರೀಕ್ಷಾ ಪ್ರಾಧಿಕಾರ

ಬೆಂಗಳೂರು

ಸಂಖ್ಯೆ: ಇಡಿ/ಕೆಇಎ/ಡಿಸಿಇಟಿ/2024 ದಿನಾಂಕ: 29-06-2024

**ಡಿಸಿಇಟಿ-2024 ರ ಫಲಿತಾಂಶವನ್ನು ದಿನಾಂಕ 29-06-2024 ರ ಮಧ್ಯಾಹ್ನ 2.00 ರ ನಂತರ ಪ್ರಕಟಿಸಲಾಗುವುದು. ಡಿಪ್ಲೊಮ ಪರೀಕ್ಷೆಯಲ್ಲಿ ನಿಗದಿತ ಅರ್ಹತೆ ಇರುವ ಮತ್ತು ಡಿಸಿಇಟಿ ಪರೀಕ್ಷೆಗೆ ಹಾಜರಾಗಿ ರ್‍ಯಾಂಕ್ ಪ್ರಕಟವಾಗದಿದ್ದಲ್ಲಿ ಅಂತಹ ಅಭ್ಯರ್ಥಿಗಳು ಡಿಪ್ಲೊಮ ಅಂಕ ಮತ್ತು ಅಂಕಪಟ್ಟಿಗಳನ್ನು ಪಿಡಿಎಫ್ ಫಾರ್ಮಾಟ್‌ನಲ್ಲಿ ಪ್ರಾಧಿಕಾರದ ಇಮೇಲ್** keaugcet24@gmail.com **ಸಲ್ಲಿಸಿದಲ್ಲಿ ಅರ್ಹತೆಯನ್ನು ಪರಿಶೀಲಿಸಿ ನಿಯಮಾನುಸಾರ ರ್‍ಯಾಂಕ್ ನೀಡಲಾಗುವುದು.**

- ಎರಡನೇ ವರ್ಷದ / ಮೂರನೇ ಸೆಮಿಸ್ಟರ್ ಇಂಜಿನಿಯರಿಂಗ್ ಕೋರ್ಸುಗಳ ಪ್ರವೇಶಾತಿಗೆ ಹಾಗು ಮೊದಲನೇ ವರ್ಷದ ಆರ್ಕಿಟೆಕ್ಚರ್ ಕೋರ್ಸಿಗೆ ಅರ್ಹತೆಯನ್ನು ಪಡೆಯುವುದಕ್ಕಾಗಿ ದಾಖಲಾತಿ ಪರಿಶೀಲನೆಯನ್ನು ಈ ಕೆಳಕಂಡ ವೇಳಾಪಟ್ಟಿಯಂತೆ ನಡೆಸಲಾಗುವುದು.
- ಅಭ್ಯರ್ಥಿಗಳು, ದಾಖಲೆಗಳ ಪರಿಶೀಲನೆಗೆ ಸಂಬಂಧಿಸಿದಂತೆ ಈ ಕೆಳಗೆ ಗೊತ್ತುಪಡಿಸಿರುವ ವೇಳಾಪಟ್ಟಿ ಪ್ರಕಾರ ರಾಜ್ಯದಲ್ಲಿನ ಸರ್ಕಾರಿ ಮತ್ತು ಅನುದಾನಿತ (Government and Aided) ಡಿಪ್ಲೊಮ ಪಾಲಿಟೆಕ್ನಿಕ್‌ಗಳಲ್ಲಿ ನಡೆಸಲಾಗುವುದು. ದಾಖಲೆಗಳ ಪರಿಶೀಲನೆಯನ್ನು ನಡೆಸಲಾಗುವ ಸರ್ಕಾರಿ ಮತ್ತು ಅನುದಾನಿತ ಪಾಲಿಟೆಕ್ನಿಕ್ ಕಾಲೇಜುಗಳ ವಿವರಗಳನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗಿದೆ.
- ಅಭ್ಯರ್ಥಿಯು ಕೆಇಎ ವೆಬ್‌ಸೈಟಿನಲ್ಲಿ ಪ್ರಕಟಿಸಿರುವ ಯಾವುದಾದರೂ ಹತ್ತಿರದ ಸರ್ಕಾರಿ ಅಥವಾ ಅನುದಾನಿತ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಖುದ್ದಾಗಿ ಹಾಜರಿರಬೇಕು. ಅಂದರೆ, ಅವರ ಪರವಾಗಿ ಬೇರೆ ಯಾರೂ ಹಾಜರಾಗುವಂತಿಲ್ಲ ಅಥವಾ ಅವರ ಪರವಾಗಿ ಬಂದಿರುವ ಯಾರೇ ಪ್ರತಿನಿಧಿಗಳಿಗೆ ಹಾಜರಾಗಲು ಅವಕಾಶ ನೀಡುವುದಿಲ್ಲ. ಈ ವೇಳಾಪಟ್ಟಿಯು ತಾತ್ಕಾಲಿಕ ಹಾಗು ಬದಲಾವಣೆಗೆ ಒಳಪಟ್ಟಿರುತ್ತದೆ. ಅಭ್ಯರ್ಥಿಗಳು ಆಗಿಂದಾಗ್ಗೆ ಪ್ರಾಧಿಕಾರದ ವೆಬ್‌ಸೈಟನ್ನು ಪರಿಶೀಲಿಸುತ್ತಿರಲು ಸೂಚಿಸಲಾಗಿದೆ.
- ವಿಶೇಷ ಪ್ರವರ್ಗದ ಎನ್‌ಸಿಸಿ, ಕ್ರೀಡೆ, ಸೈನಿಕರು, ಮಾಜಿ ಸೈನಿಕರು, ಸಿಎಪಿಎಫ್, ಮಾಜಿ-ಸಿಎಪಿಎಫ್- ಕ್ಲೇಮ್ ಮಾಡಿರುವ ಅಭ್ಯರ್ಥಿಗಳು ಮಾತ್ರ ವಿಶೇಷ ವರ್ಗದ ಪ್ರಮಾಣ ಪತ್ರಗಳು ಮತ್ತು ಇತರೆ ಶೈಕ್ಷಣಿಕ ಪ್ರಮಾಣ ಪತ್ರಗಳೊಂದಿಗೆ ರ್‍ಯಾಂಕ್ ಪಟ್ಟಿಯ ಅನುಸಾರ ಕೆಇಎ, ಮಲ್ಲೇಶ್ವರಂ, ಬೆಂಗಳೂರು ಇಲ್ಲಿ ಪರಿಶೀಲನೆಗೆ ಹಾಜರಾಗುವುದು.

ಡಿಸಿಇಟಿ- 2024 **ವಿಕಲಚೇತನ ಅಭ್ಯರ್ಥಿಗಳಿಗೆ ವೈದ್ಯಕೀಯ ತಪಾಸಣೆ: ದಿನಾಂಕ 01-07-2024 – ವಿವರವಾದ ಪ್ರಕಟಣೆಯನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗಿದೆ.**

**ಡಿಸಿಇಟಿ-2024 ದಾಖಲಾತಿ ಪರಿಶೀಲನೆ**

| ದಿನಾಂಕ | ಬೆಳಗಿನ ಅವಧಿ -1<br>ಬೆ.9.45 ರಿಂದ 11.30<br>ಹಾಜರಾಗುವ ಸಮಯ: ಬೆ. 9.30<br>ರ್‍ಯಾಂಕ್ ಸಂಖ್ಯೆಗಳು | | ಬೆಳಗಿನ ಅವಧಿ -2<br>ಬೆ.11.30 ರಿಂದ ಮ.1.15<br>ಹಾಜರಾಗುವ ಸಮಯ: ಬೆ. 11.00<br>ರ್‍ಯಾಂಕ್ ಸಂಖ್ಯೆಗಳು | | ಮಧ್ಯಾಹ್ನದ ಅವಧಿ -1<br>ಮ.2.00 ರಿಂದ ಮ.4.00<br>ಹಾಜರಾಗುವ ಸಮಯ: ಮ. 1.30<br>ರ್‍ಯಾಂಕ್ ಸಂಖ್ಯೆಗಳು | | ಮಧ್ಯಾಹ್ನದ ಅವಧಿ -2<br>ಸಂ.4.15 ರಿಂದ<br>ಹಾಜರಾಗುವ ಸಮಯ: ಮ. 3.15<br>ರ್‍ಯಾಂಕ್ ಸಂಖ್ಯೆಗಳು | |
|---|---|---|---|---|---|---|---|---|
| | ಇಂದ | ವರೆಗೆ | ಇಂದ | ವರೆಗೆ | ಇಂದ | ವರೆಗೆ | ಇಂದ | ವರೆಗೆ |
| ಸರ್ಕಾರಿ ಮತ್ತು ಅನುದಾನಿತ ಪಾಲಿಟೆಕ್ನಿಕ್ ಕಾಲೇಜುಗಳ ವಿವರಗಳನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗಿದೆ. | | | | | | | | |
| 02-07-2024 | 1 | 1200 | 1201 | 2400 | 2401 | 3200 | 3201 | 4000 |
| 03-07-2024 | 4001 | 6000 | 6001 | 8000 | 8001 | 10000 | 10001 | 12000 |
| 04-07-2024 | 12001 | 14000 | 14001 | 17000 | 17001 | ಕೊನೆಯ ರ್‍ಯಾಂಕ್ | | |

ವಿದ್ಯಾರ್ಥಿಗಳು ದಾಖಲೆಗಳ ಪರಿಶೀಲನೆಗೆ ಬರುವ ಸಮಯದಲ್ಲಿ, ತಾವು ಆನ್‌ಲೈನ್ ಅರ್ಜಿ ಸಲ್ಲಿಸುವಾಗ ಕೋರಿರುವ ಕ್ಲೇಮುಗಳಿಗೆ ಪೂರಕವಾದ ಎಲ್ಲಾ ಶೈಕ್ಷಣಿಕ ಮೂಲ ದಾಖಲೆಗಳನ್ನು ಮತ್ತು ಒಂದು attested ಸೆಟ್ ಜೆರಾಕ್ಸ್ ಪ್ರತಿಗಳನ್ನು ಸಲ್ಲಿಸಬೇಕು. ಪರಿಶೀಲನೆಯ ದಿನದಂದು ಯಾವುದೇ ದಾಖಲೆ / ಪ್ರಮಾಣಪತ್ರ / ಅಂಕಪಟ್ಟಿಯನ್ನು ಹಾಜರುಪಡಿಸಲು ಯಾರೇ ವಿದ್ಯಾರ್ಥಿ ವಿಫಲನಾದ ಪಕ್ಷದಲ್ಲಿ, ಅಂಥ ವಿದ್ಯಾರ್ಥಿಯ ದಾಖಲೆಗಳನ್ನು ಪರಿಶೀಲನೆ ಮಾಡುವುದಿಲ್ಲ ಮತ್ತು ಅವರ ನೋಂದಣಿ ಪ್ರಕ್ರಿಯೆಯನ್ನು ಪೂರ್ಣಗೊಳಿಸುವುದಿಲ್ಲ. ಆನಂತರ ಅವರು ತಮ್ಮ ಇಚ್ಛೆ (option) ಯನ್ನು ನೀಡುವುದಕ್ಕೆ ಸಂಬಂಧಿಸಿದಂತೆ ಅವರನ್ನು ಪರಿಗಣಿಸುವುದಿಲ್ಲ.

ದಾಖಲೆಗಳ ಪರಿಶೀಲನೆಯ ನಂತರ ಅರ್ಹರಾಗುವಂತಹ ವಿದ್ಯಾರ್ಥಿಗಳನ್ನು ಮಾತ್ರ, ಅವರು ತಮ್ಮ ಇಚ್ಛೆಗಳನ್ನು ನಮೂದಿಸುವುದಕ್ಕಾಗಿ ಪರಿಗಣಿಸಲಾಗುವುದು. ದಾಖಲಾತಿ ಪರಿಶೀಲನೆಗೆ **ಸಲ್ಲಿಸಬೇಕಾದ ಮೂಲ ದಾಖಲೆಗಳ ವಿವರಗಳನ್ನು ಡಿಸಿಇಟಿ-2024ರ ಇ-ಬ್ರೋಚರ್‌ನಲ್ಲಿ ಪ್ರಕಟಿಸಲಾಗಿದೆ.**

**ಕಾರ್ಯನಿರ್ವಾಹಕ ನಿರ್ದೇಶಕರು**

ವಿಶೇಷ ಪ್ರವರ್ಗದ (ಎನ್‌ಸಿಸಿ, ಕ್ರೀಡೆ, ಸೈನಿಕರು, ಮಾಜಿ ಸೈನಿಕರು, ಸಿಎಪಿಎಫ್, ಮಾಜಿ-ಸಿಎಪಿಎಫ್) ಕ್ಲೇಮ್ ಮಾಡಿದ್ದಲ್ಲಿ ಮಾತ್ರ ಎಲ್ಲಾ ಪ್ರಮಾಣ ಪತ್ರಗಳು ಮತ್ತು ಇತರೆ ಮೂಲ ದಾಖಲೆಗಳೊಂದಿಗೆ ಕೆಇಎ, ಮಲ್ಲೇಶ್ವರಂ, ಬೆಂಗಳೂರು ಇಲ್ಲಿ ರ್‍ಯಾಂಕ್ ಅನುಸಾರ ಪರಿಶೀಲನೆಗೆ ಹಾಜರಾಗಬೇಕು. ವಿಶೇಷ ಪ್ರವರ್ಗಕ್ಕೆ ಸಲ್ಲದೇ ಇರುವ ಇತರೆ ಎಲ್ಲಾ ಅಭ್ಯರ್ಥಿಗಳು ವೆಬ್‌ಸೈಟನಲ್ಲಿ ಪ್ರಕಟಿಸಿರುವ ಪಾಲಿಟೆಕ್ನಿಕ್ ಕಾಲೇಜುಗಳಿಗೆ ರ್‍ಯಾಂಕ್ ಅನುಸಾರ ಪರಿಶೀಲನೆಗೆ ಹಾಜರಾಗುವುದು.

## ಡಿಸಿಇಟಿ–2024 ರ ಸೀಟು ಹಂಚಿಕೆಗೆ ಅರ್ಹಗೊಳ್ಳಲು ಮೂಲ ದಾಖಲೆಗಳನ್ನು ಸಲ್ಲಿಸುವ ಬಗ್ಗೆ

| ಕ್ರಮ ಸಂಖ್ಯೆ | ಮೂಲ ದಾಖಲೆಗಳ ವಿವರ |
|---|---|
| 01 | ಡಿಸಿಇಟಿ–2024ಕ್ಕೆ ಭರ್ತಿ ಮಾಡಿ ಅಂತಿಮವಾಗಿ ಸಲ್ಲಿಸಿರುವ ಪ್ರತಿ. |
| 02 | "ಡಿಪ್ಲೊಮ ಸಾಮಾನ್ಯ ಪ್ರವೇಶ ಪರೀಕ್ಷೆ–2024" ರ ಮೂಲ ಪ್ರವೇಶ ಪತ್ರ |
| 03 | ಎಸ್ಎಸ್ಎಲ್ಸಿ/ 10ನೇ ತರಗತಿಯ ಅಂಕಪಟ್ಟಿ |
| 04 | ಡಿಪ್ಲೊಮ ಅಂಕಪಟ್ಟಿಗಳು ಎಲ್ಲಾ ಸೆಮಿಸ್ಟರ್ / ಎಲ್ಲಾ ವರ್ಷದ ಮೂಲ ಅಂಕಪಟ್ಟಿಗಳು |
| 05 | 7 ವರ್ಷದ ವ್ಯಾಸಂಗ ಪ್ರಮಾಣ ಪತ್ರ:<br>1 ರಿಂದ ಡಿಪ್ಲೊಮ ಅಂತಿಮ ವರ್ಷದವರೆಗೆ ಒಟ್ಟು 7 ವರ್ಷದ ವ್ಯಾಸಂಗ ಪ್ರಮಾಣಪತ್ರ (ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿ / ಸಾರ್ವಜನಿಕ ಶಿಕ್ಷಣ ಉಪ ನಿರ್ದೇಶಕರು ಮೇಲುರುಜು ಸಹಿ ಹೊಂದಿರುವ) ಎಸ್.ಎಸ್.ಎಲ್.ಸಿ. ಅಥವಾ ಡಿಪ್ಲೊಮ ಒಳಗೊಂಡಂತೆ.<br>7 ವರ್ಷದ ವ್ಯಾಸಂಗ ಪ್ರಮಾಣ ಪತ್ರದಲ್ಲಿ ಸಿಬಿಎಸ್ಸಿ / ಐಸಿಎಸ್ಸಿ ಅಭ್ಯರ್ಥಿಗಳಿಗೆ ಮೇಲುರುಜು ಅಗತ್ಯತೆ ಇರುವುದಿಲ್ಲ. |

**ಮುಂದಿನ ದಾಖಲೆಗಳನ್ನು "ಅನ್ವಯವಾಗುವಂತಿದ್ದ ಪಕ್ಷದಲ್ಲಿ ಮಾತ್ರ" ಸಲ್ಲಿಸಬೇಕು**

| | |
|---|---|
| 06 | **ಕನ್ನಡ ಮಾಧ್ಯಮ ವ್ಯಾಸಂಗ ಪ್ರಮಾಣ ಪತ್ರ :**<br>1ನೇ ತರಗತಿಯಿಂದ 10ನೇ ತರಗತಿಯವರೆಗೆ ಹತ್ತು ಪೂರ್ಣಾವಧಿ ಶೈಕ್ಷಣಿಕ ವರ್ಷಗಳ ಕಾಲ ಕರ್ನಾಟಕದಲ್ಲಿ ಅಥವಾ ಕರ್ನಾಟಕ ರಾಜ್ಯದ ಹೊರಗಡೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ವಿದ್ಯಾರ್ಥಿಗಳು ಕ್ಷೇತ್ರ ಶಿಕ್ಷಣಾಧಿಕಾರಿಗಳು ಮೇಲುರುಜು ಮಾಡಿರುವ ಕನ್ನಡ ಮಾಧ್ಯಮ ಪ್ರಮಾಣಪತ್ರ |
| 07 | **ಗ್ರಾಮೀಣ ವ್ಯಾಸಂಗ ಪ್ರಮಾಣ ಪತ್ರ:**<br>ಕರ್ನಾಟಕ ರಾಜ್ಯದಲ್ಲಿನ ಗ್ರಾಮೀಣ ಪ್ರದೇಶಗಳಲ್ಲಿ ಇರುವ ಶಿಕ್ಷಣ ಸಂಸ್ಥೆಗಳಲ್ಲಿ 1ನೇ ತರಗತಿಯಿಂದ 10ನೇ ತರಗತಿಯವರೆಗೆ, 10 ಪೂರ್ಣಾವಧಿ ಶೈಕ್ಷಣಿಕ ವರ್ಷಗಳವರೆಗೆ ವ್ಯಾಸಂಗ ಮಾಡಿರುವಂತಹ ಗ್ರಾಮೀಣ ವಿದ್ಯಾರ್ಥಿಗಳು ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮೇಲುರುಜು ಮಾಡಿರುವ ಗ್ರಾಮೀಣ ವ್ಯಾಸಂಗ ಪ್ರಮಾಣಪತ್ರ.<br>ಸಾಮಾನ್ಯ ವರ್ಗದ ಅಭ್ಯರ್ಥಿಗಳು ಗ್ರಾಮೀಣ ವ್ಯಾಸಂಗ ಪ್ರಮಾಣಪತ್ರದ ಜೊತೆಯಲ್ಲಿ ಪರಿಶೀಲನಾ ಪ್ರಮಾಣಪತ್ರ ವಿದ್ಯಾರ್ಥಿಗಳಿಗೆ ಮಾತ್ರ. |
| 08 | **ಜಾತಿ ಪ್ರಮಾಣ ಪತ್ರ/ ಜಾತಿ ಮತ್ತು ಆದಾಯ ಪ್ರಮಾಣಪತ್ರ : (ಚಾಲ್ತಿಯಲ್ಲಿರುವ / Validity ಇರುವ)**<br>ಮೀಸಲಾತಿ ಪ್ರಯೋಜನಗಳನ್ನು ಕೋರುವುದಕ್ಕೆ ಸಂಬಂಧಿಸಿದಂತೆ, ಸಂಬಂಧಪಟ್ಟ ತಹಸೀಲ್ದಾರ್‌ರವರಿಂದ ಪಡೆದಿರುವ ಜಾತಿ ಪ್ರಮಾಣ ಪತ್ರ/ ಜಾತಿ ಮತ್ತು ಆದಾಯ ಪ್ರಮಾಣಪತ್ರ / ಆದಾಯ ಪ್ರಮಾಣ ಪತ್ರಗಳು (ಅಧಿಕಾರವ್ಯಾಪ್ತಿಯಿರುವ ಸಂಬಂಧಪಟ್ಟ ತಹಸೀಲ್ದಾರ್‌ರವರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳು ನಮೂನೆ 'ಡಿ' ನಲ್ಲಿ ಮತ್ತು ಪ್ರವರ್ಗ–1ರ ಅಭ್ಯರ್ಥಿಗಳು ನಮೂನೆ 'ಇ' ನಲ್ಲಿ ಹಾಗು ಇತರ ಹಿಂದುಳಿದ ವರ್ಗಗಳಾದ 2ಎ, 2ಬಿ, 3ಎ ಮತ್ತು 3ಬಿ ಗಳಂತಹ ಅಭ್ಯರ್ಥಿಗಳು ನಮೂನೆ 'ಎಫ್' ನಲ್ಲಿ ನೀಡಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳು)<br>ಅಲ್ಲದೆ, ಮೀಸಲು ಪ್ರವರ್ಗದಡಿಯಲ್ಲಿ ಸೀಟನ್ನು ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ–1ಕ್ಕೆ ಸೇರಿರುವ ವಿದ್ಯಾರ್ಥಿಗಳು, ಅಧಿಕಾರವ್ಯಾಪ್ತಿಯ ತಹಸೀಲ್ದಾರ್‌ರವರು ನೀಡಿರುವ ಆದಾಯ ಪ್ರಮಾಣಪತ್ರ. ಬೋಧನ ಶುಲ್ಕ ಮರುಪಾವತಿ ಮತ್ತು ಭಾರತ ಸರ್ಕಾರದ ವಿದ್ಯಾರ್ಥಿ ವೇತನ ಪ್ರಯೋಜನ ಪಡೆಯುವುದಕ್ಕಾಗಿ. |
| 09 | 371 (ಜೆ)) – ಹೈದರಾಬಾದ್–ಕರ್ನಾಟಕ ಪ್ರದೇಶ ಮೀಸಲಾತಿ :<br>ಹೈದರಾಬಾದ್–ಕರ್ನಾಟಕ ಪ್ರದೇಶ ಮೀಸಲಾತಿ (ಅನುಚ್ಛೇದ 371 (ಜೆ))ಯನ್ನು ಕೋರುವ ವಿದ್ಯಾರ್ಥಿಗಳು, ಸಂಬಂಧಪಟ್ಟ ಉಪ ವಿಭಾಗಾಧಿಕಾರಿ (ಅಸಿಸ್ಟೆಂಟ್ ಕಮಿಷನರ್)ಅವರು ಅನುಬಂಧ–ಎ (ಅರ್ಹತಾ ಪ್ರಮಾಣಪತ್ರ–ನಿಯಮ 3(3))ರಲ್ಲಿ ನೀಡಿರುವ ಪ್ರಮಾಣಪತ್ರ. |
| 10 | ತಂದೆ–ತಾಯಿ/ ಪೋಷಕರ, ವಾಸ ಸ್ಥಳ/ ವ್ಯಾಸಂಗ/ ಉದ್ಯೋಗದ ಆಧಾರದ ಮೇಲೆ ಸರ್ಕಾರಿ ಸೀಟುಗಳಿಗೆ ಸಂಬಂಧಿಸಿದಂತೆ ಅರ್ಹತೆಯನ್ನು ಕೋರುವ ವಿದ್ಯಾರ್ಥಿಗಳು, ಅವರ ತಂದೆ–ತಾಯಿ / ಪೋಷಕರ ವ್ಯಾಸಂಗ ಪ್ರಮಾಣಪತ್ರ/ ತಂದೆ–ತಾಯಿ/ ಪೋಷಕರ ಸ್ವಂತ ಪಟ್ಟಣ / ಸ್ವಂತ ಊರಿನ ಪ್ರಮಾಣಪತ್ರ/ ತಂದೆ–ತಾಯಿ/ಪೋಷಕರ ವಾಸಸ್ಥಳದ ಪ್ರಮಾಣಪತ್ರ / ತಂದೆ–ತಾಯಿ / ಪೋಷಕರ ಉದ್ಯೋಗ ಪ್ರಮಾಣಪತ್ರ / ತಂದೆ–ತಾಯಿ / ಪೋಷಕರ ಸಂಚಿತ ದಾಖಲೆ / ತಂದೆ–ತಾಯಿ / ಪೋಷಕರ ಅಂಕಪಟ್ಟಿ ಮೊದಲಾದವುಗಳು. |
| 11 | ಹೊರನಾಡು ಮತ್ತು ಗಡಿನಾಡು ಕನ್ನಡಿಗ ಕೋಟಾದ ಅಡಿಯಲ್ಲಿ ಅರ್ಹತೆಯನ್ನು ಕೋರುವಂತಹ ಅಭ್ಯರ್ಥಿಗಳು (ತಮ್ಮ ಮಾತೃ ಭಾಷೆ ಬಗ್ಗೆ) ಯುಕ್ತವಾಗಿ ಘೋಷಿಸಿರುವ ಅಫಿಡವಿಟ್ (ಖಂಡ ಸಿ & ಡಿ). |
| 12 | ಮಾನ್ಯತೆ ಇರುವ ನಾಟಾ ಪರೀಕ್ಷೆಯ ಅಂಕಪಟ್ಟಿ – ಆರ್ಕಿಟೆಕ್ಚರ್ ಕೋರ್ಸಿಗೆ ಮಾತ್ರ |